ಕೇಂದ್ರ ಸರ್ಕಾರದ ಹಣ ೫೦ ಪರ್ಸೆಂಟ್ ರಾಜ್ಯ ಸರ್ಕಾರದ ಹಣ ೫೦ ಪರ್ಸೆಂಟ್ ಏನಿತ್ತು, ಅದನ್ನು ಈಗ ಕೇಂದ್ರ ಸರ್ಕಾರ ೭೫ ಪರ್ಸೆಂಟ್ ರಾಜ್ಯ ಸರ್ಕಾರದ್ದು ೨೫ ಪರ್ಸೆಂಟ್ ಎಂದು ಮಾಡಿದ್ದಾರೆ. ಈಗ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಹಣವನ್ನು ನಜೀರ್ ಅವಾಸ್ ಯೋಜನೆಗೆ ಉಪಯೋಗ ಮಾಡಿದರೆ ಅವರು ಆಕ್ಷೇಪಣೆ ಮಾಡಿದರೆ ಏನು ಮಾಡುತ್ತೀರಿ ? ತಾವು ಮಾತನಾಡುವಂತಹ ಸಂದರ್ಭದಲ್ಲಿ ತಾವು ಇಂದಿರಾ ಆವಾಸ್ ಹೋಜನೆ ಬಗ್ಗೆ ಹೇಳಿದಿರಿ. ಆಕಾರ್ಯಕ್ರಮವನ್ನು ಕೇಂದ್ರ ಸರ್ಕಾರದವರು ಜಾರಿ ಮಾಡಿದ್ದು, ಆ ಯೋಜನೆಗೆ ಕೇಂದ್ರ ಸರ್ಕಾರದವರು ವಿಶೇಷವಾಗಿ ಹಣ ರಾಜ್ಯ ಸರ್ಕಾರಗಳಿಗೆ ಕೊಟ್ಟು ಇಂಪ್ಲಿಮೆಂಟ್ ಮಾಡಿ ಎಂದು ಹೇಳಿದ್ದಾರೆ. ಅದು ಬೇರೆ. ಇದೇ ಬೇರೆ. ತಾವು ಆ ಹಣವನ್ನು ನಜೀರ್ ಅವಾಸ್ ಯೋಜನೆಗೆ ಖರ್ಚು ಮಾಡಿದರೆ ನಾಳೆ ಏನಾದರೂ ಆಕ್ಷೇಪಣೆ ಬರಬಹುದು ಎನ್ನುವ ಶಂಕೆ ನಮಗಿದೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಆ ಶಂಕೆಯನ್ನು ನಿವಾರಣೆ ಮಾಡಿದ್ದೇನೆಂದು ಭಾವಿಸಿದ್ದೇನೆ. ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮಗಳನ್ನು ರೂಪಿಸತಕ್ಕಂಥ ಅಧಿಕಾರ ನಮಗೆ ಇದೆ. ಗುಂಪು ಮನೆಗಳನ್ನು ಕಟ್ಟುವ ಯೋಜನೆಯಲ್ಲಿ ಈ ನಜೀರ್ ಅವಾಸ್ ಯೋಜನೆಯನ್ನು ಜಾರಿಗೆ ತಂದು ಕೇಂದ್ರ ಸರ್ಕಾರದ ಮಾರ್ಗ ಸೂಚಿಯಲ್ಲಿ ಆ ಗುಂಪು ಮನೆಗಳನ್ನು ಕಟ್ಟುತ್ತಿದ್ದೇವೆ. ಇದರಲ್ಲಿ ಆಕ್ಷೇಪಣೆ ಮಾಡುವಂತಾದ್ದು ಏನೂ ಇಲ್ಲ ೭೫ ಪರ್ಸೆಂಟ್ ಕೇಂದ್ರ ಸರ್ಕಾರ ಕೊಡುವುದು ೨೫ ಪರ್ಸೆಂಟ್ ರಾಜ್ಯ ಸರ್ಕಾರದ ಹಣ ಎಂದು ಮಾನ್ಯ ಸದಸ್ಯರುಹೇಳಿದರು ಅದು ಈ ವರ್ಷದ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು. ಹಿಂದೆ ಆ ರೀತಿಇರಲಿಲ್ಲ.

ಜೀತ ವಿಮುಕ್ತರಿಗೆ ಪುನರ್ವಸತಿ

೫೩೧(೭೧೦) ಶ್ರೀ ಎಂ ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ —

ಅ) ಮೈಸೂರು ಜಿಲ್ಲೆಯಲ್ಲಿ ಗುರುತಿಸಲಾಗಿರುವ ಜೀತವಿಮುಕ್ತರೆಷ್ಟು ? ಎಷ್ಟು ಜನರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಇನ್ನೂ ಪುನರ್ವಸತಿಗೊಳಿಸಬೇಕಾದವರೆಷ್ಟು ? ಪುನರ್ವಸತಿ ಗೊಳಿಸಲಾಗಿರುವವರಿಗೆ ನೀಡಿರುವ ಸೌಲಭ್ಯಗಳೇನು ?

ಆ) ಪಟ್ಟಿಯಲ್ಲಿದ್ದವರ ಹೆಸರಿನಲ್ಲಿ ಬೇರೆ ಯಾರದೇ ಜೀತವಿಮುಕ್ತರಲ್ಲದವರು ಸೌಲಭ್ಯ ಪಡೆದಿರುವ ಪ್ರಕರಣಗಳಿವೆಯೇ, ಇದ್ದಲ್ಲಿ ಎಷ್ಟು ಹಾಗಿದ್ದಲ್ಲಿ ತೆಗೆದುಕೊಳ್ಳಲಾಗಿರುವ ಕ್ರಮವೇನು ?

ಇ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಗುರ್ತಿಸಲಾಗಿರುವ ಜೀತವಿಮುಕ್ತರೆಷ್ಟು ? ಎಷ್ಟು ಜನರನ್ನು ಪುನರ್ವಸತಿಗೊಳಿಸಲಾಗಿದೆ ? ಪಟ್ಟಿಯಲ್ಲಿ ಹೆಸರುಗಳಿದ್ದು ಸಹ ಸೌಲಭ್ಯವನ್ನು ಅವರಿಗೆ ಕೊಡದಿರಲು ಕಾರಣಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

ಅ) ಗುರುತಿಸುವವರ ಸಂಖ್ಯೆ : ೨೪೩೫೫. ಪುನರ್ವಸತಿ ಕಲ್ಪಿಸುವವರ ಸಂಖ್ಯೆ : ೧೬೮೬೭ ಇನ್ನೂ ಪುನರ್ವಸತಿ ಕಲ್ಪಿಸಬೇಕಾಗಿರುವವರ ಸಂಖ್ಯೆ : ೫೪೬೭
ಪುನರ್ವಸತಿ ಕಲ್ಪಿಸಬೇಕಾಗಿರುವ ಜೀತವಿಮುಕ್ತರಿಗೆ ತಲಾ ೬೫೦೦ ರೂ. ವೆಚ್ಚದಲ್ಲಿ ಆರ್ಥಿಕ ಸ್ವತ್ತುಗಳಾದ ಕಾರು, ಮೋಕೆ, ಎಮ್ಮೆ ಮಿಶ್ರತಳಿ ಹಸು, ಎತ್ತು ಮತ್ತು ಗಾಡಿ ಒದಗಿಸುವುದರ ಮೂಲಕ ಹಾಗೂ ಸಣ್ಣ ವ್ಯಾಪಾರ, ಸೈಕಲ್ ಅಂಗಡಿ ನಡೆಸಲು ಸಹಾಯ ಮಾಡುವುದು.

ಆ) ಇವೆ ೧೧, ೯ ಪ್ರಕರಣಗಳನ್ನು ಮುಂದಿನ ಕ್ರಮಕ್ಕಾಗಿ ಪೋಲೀಸರಿಗೆ ಕಳುಹಿಸಲಾಗಿದೆ, ಇನ್ನು ೨ ಪ್ರಕರಣಗಳನ್ನು ಪೋಲಿಸರಿಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಗುರ್ತಿಸುವವರ ಸಂಖ್ಯೆ ; ೧೯೮೬ ಪುನರ್ವಸತಿ ಕಲ್ಪಿಸಿರುವವರ ಸಂಖ್ಯೆ ; ೧೬೨೧ ಪಟ್ಟಿಯಲ್ಲಿರತಕ್ಕ ಜೀತವಿಮುಕ್ತರನ್ನು ವಾರ್ಷಿಕ ಗುರಿಯ ಪ್ರಕಾರ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಬಾಕಿ ಉಳಿದ ಜೀತವಿಮುಕ್ತರ ಪುನರ್ವಸತಿ ಸೌಲಭ್ಯವನ್ನು ೧೯೮೯-೯೦ ನೇ ಸಾಲಿನಲ್ಲಿ ಕಲ್ಪಿಸಲು ಉದ್ದೇಶಿಸಲಾಗಿದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ಕೇಳತಕ್ಕಥಾದ್ದು ಇಷ್ಟೆ, ಇಂದು ರಾಜ್ಯಾದ್ಯಂತ ಎಷ್ಟು ಜನರನ್ನು ಪುನರ್‌ವಸತಿಗೊಳಿಸಲಾಗಿದೆ ಹಾಗೂ ಪುನರ್‌ವಸತಿಗೊಳಿಸ ಬೇಕಾಗಿದೆ ? ಮತ್ತು ಈ ರಾಜ್ಯದಲ್ಲಿ ಪುನರ್‌ವಸತಿಗೊಳಿಸುವುದಕ್ಕಾಗಿ ನಾವು ಏನಾದರೂ ಒಂದು ನಿಗದಿಯಾದ ಸಮಯವನ್ನು ಗುರುತು ಮಾಡಿಕೊಂಡಿದ್ದೀರಾ. ಎಂದು ಮತ್ತೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಜನರು ಆರ್ಥಿಕವಾಗಿ ಮುಂದೆ ಬರುವುದಕ್ಕೆ ಏನೆಲ್ಲ ಕಾರಿ. ಕೋಳಿ ಮತ್ತಿತರ ಅನುಕೂಲಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ, ಪುನರ್‌ವಸತಿ ಗೊಳಿಸತಕ್ಕವರಿಗೆ ಏನೇನು ಸೌಲಭ್ಯಗಳು ಸಿಕ್ಕಿವೆ ಹಾಗೂ ಅವುಗಳು ಇವೆಯೇ ಎಂಬುದರ ಬಗ್ಗೆ ಸರ್ವೇ ಮಾಡಿದ್ದೀರಾ ಎಂದು ಹೇಳುವುದಕ್ಕೆ ಬಯಸುತ್ತೇನೆ. ಪುನರ್‌ವಸತಿಗೊಳಿಸಿರುವ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಸರ್ಕಾರದವರು ಪುನರ್‌ವಸತಿ ಮಾಡುವುದಕ್ಕಾಗಿ ಜನರಿಗೆ ಕೊಡುವ ೬೨೫೦ ರೂಪಾಯಿಗಳಲ್ಲಿ ಕೊಯಮತ್ತೂರು ಕಡೆಗೆ ಹೋಗಿ ಏನೆಲ್ಲಗಳನ್ನು ಕೊಂಡುಕೊಂಡು ಬರುತ್ತಾರೆ. ಇದರಿಂದ ಫಲಾನುಭವಿಗಳಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ತಾವು ಯೋಚನೆ ಮಾಡಿದ್ದೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸಭಾಧ್ಯಕ್ಷರೇ, ಈಗ ಪುನರ್‌ವಸತಿ ಕಲ್ಪಿಸಿರತಕ್ಕವರಿಗೆ ೬೨೫೦ರೂಪಾಯಿಗಳವರೆಗೆ ಗರಿಷ್ಟವಾಗಿ ಹಣವನ್ನು ಕೊಡಲಾಗುತ್ತಿದೆ. ಮಾನ್ಯ ಸದಸ್ಯರ ಕ್ಷೇತ್ರವಾದ ಹೆಗಡದೇವನ ಕೊಟಿಯಲ್ಲೂ ಪುನರ್‌ವಸತಿಗೊಳಿಸಿದ್ದೇವೆ. ಇನ್ನೂ ಪುನರ್‌ವಸತಿಗೊಳಿಸಬೇಕಾದ ೩೬೫ ಜನರಿಗೆ ೧೯೮೯-೯೦ನೇ ಸಾಲಿನಲ್ಲಿ ಹಣ ಸಹಾಯ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಫಲಾನುಭವಿಗಳಿಗೆ ಕೊಡುವ ೬೨೫೦ ರೂಪಾಯಿಗಳು ದುರುಪಯೋಗವಾಗುತ್ತದೆಂದು ನಮ್ಮ ಗಮನಕ್ಕೆ ಬಂದಿದೆ. ಐ. ಆರ್. ಡಿ. ಪಿ. ಯೋಜನೆ ಮೂಲಕ ಕೊಡುತ್ತಿರುವ ಲೋನ್‌ಗಳು ದುರುಪಯೋಗವಾಗಿರುವುದು ನಿಜ. ಅದಕ್ಕಾಗಿ ಒಂದು ಪ್ರತ್ಯೇಕವಾದ ಪರಿಯನ್ನು ತರಿಸಿಕೊಂಡು ವಿಚಾರಣೆ ಮಾಡುತ್ತೇನೆ. ಸರ್ಕಾರದವರು ಕೊಡುವ ೬೨೫೦ ರೂಪಾಯಿ ಹಣವನ್ನು ಜೀವವಿಮುಕ್ತರಿಗೆ ಬೇರೆ ರೂಪದಲ್ಲಿ ಕೊಡಬೇಕೆಂದು ಹೇಳಿದರೆ, ಆ ರೀತಿಯೂ ಮಾಡಬಹುದು. ನಾನು ಒಂದು ವಿಷಯವನ್ನು ಹೇಳುತ್ತೇನೆ. ಜೀತ ವಿಮುಕ್ತರಿಗೆ ಸರಿಯಾದ ಒಂದು ಸೌಲಭ್ಯವನ್ನು ಒದಗಿಸಿಕೊಡುವುದಕ್ಕಾಗಿ ಬಳಪಳ್ಳಿ ಶಾಸಕರಾದ ಶ್ರೀ ಬಿ. ಸೋಮಶೇಖರಪ್ಪನವರು ಒಂದು ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಇದು ಮೂರುವರೆ ಕೋಟಿ ರೂಪಾಯಿಗಳ ಒಂದು ಯೋಜನೆ. ೪೦೦ ಎಕರೆ ಜಮೀನಿನಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಲಾಗುತ್ತದೆ. ಈ ಯೋಜನೆಯಿಂದ ಜೀತ ವಿಮುಕ್ತರಿಗೆ ಒಳ್ಳೆಯ ರೀತಿಯಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಡಬಹುದು. ಯೋಜನೆಯನ್ನು ಮಾನ್ಯ ಸೋಮಶೇಖರಪ್ಪನವರ ಅಧ್ಯಕ್ಷತೆಯಲ್ಲಿ ಮಾಡಲಾಗಿದೆ. ೧೫ ವರ್ಷಗಳಲ್ಲಿ ಎಲ್ಲರಿಗೂ ಪುನರ್‌ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬಹುದಾಗಿದೆ. ತಾವು ಸಹ ಇಂಥ ಯೋಜನೆ ಮಾಡುವುದಾದರೆ, ಮೈಸೂರಿನಲ್ಲಿ ತಾವು ಮಾಡಬಹುದು. ಅದಕ್ಕೆ ನಾವು ಹಣ ಸಹಾಯವನ್ನು ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಷಯವನ್ನು ಹೇಳುತ್ತೇನೆ, ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ಅಗ್ರಿಕಲ್ಚರಲ್ ಏಸ್ಟೇಟ್ ಮಾಡುವುದಕ್ಕೆ ಒಂದು ಸ್ಕೀಮ್ ತಯಾರು ಮಾಡಿದ್ದೆ. ಅದು ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದೆಂದು ಕಾಣುತ್ತದೆ. ಇದರ ಪ್ರಕಾರ ಯಾರು ಬಾಂಡೆಡ್ ಲೇಬರರ್ಸ್ ಇದ್ದಾರೋ ಅಂಥವರುಗಳಿಗೆ ಸರ್ಕಾರಿ ಜಮೀನುಗಳನ್ನು ಹುಡುಕಿ ಸರ್ಕಾರಿ ಜಮೀನಿನಲ್ಲಿ ವಸತಿ ಸೌಕರ್ಯ ಮಾಡಿ, ೩-೪ ಎಕರೆ ಜಮೀನನ್ನು ಅವರ ಹೆಸರಿಗೆ ಕೊಡುವಹಾಗೆ ಮಾಡಿ ಪುನರ್‌ವಸತಿ ಕಲ್ಪಿಸುವುದಕ್ಕೆ ನಾನು ಪ್ರಯತ್ನ ಮಾಡಿದ್ದೆ. ಈ ಬಗ್ಗೆ ನನ್ನ ಕ್ಷೇತ್ರವಾದ ಯಲಹಂಕದಲ್ಲಿ ಒಂದು ಪ್ರಯೋಗವನ್ನು ಮಾಡಿದ್ದೇನೆ. ಅದು ಯಶಸ್ವಿ ಆಗಿದೆ. ಅದೇ ರೀತಿ ತಾವುಕೂಡಾ ಮಾಡಬಹುದು. ಬಾಂಡೆಡ್ ಲೇಬರರ್‌ಗಳಿಗೆ ಅನುಕೂಲ ಮಾಡಿ ಕೊಡುವುದಾದರೆ. ಈ ಯೋಜನೆಗಳಬಗ್ಗೆ ವಿಷಯಗಳನ್ನು ತರಿಸಿಕೊಂಡು ಅವನ್ನು ಪರಿಶೀಲನೆ ಮಾಡಿ. ನಮ್ಮ ರಾಜ್ಯದಲ್ಲಿ ಎಷ್ಟು ಜನ ಬಾಂಡೆಡ್ ಲೇಬರರ್ಸ್, ಇದ್ದಾರೋ ಅವರುಗಳಿಗೆಲ್ಲಾ ಪುನರ್‌ವಸತಿ ಕಲ್ಪಿಸುವುದಕ್ಕೆ ಈ ಯೋಜನೆ ಬಹಳ ಚೆನ್ನಾಗಿದೆ. ಇದರ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಒಳ್ಳೆಯ ಸಲಹೆ: ಆದರೆ, ನಾನು ಪುನರ್‌ವಸತಿ ಕಲ್ಪಿಸುವ ಬಗ್ಗೆ ವಿಚಾರ ಮಾಡಲು ಮೈಸೂರು, ಮಂಗಳೂರು ಹಾಗೂ ಇನ್ನಿತರ ಕಡೆಗಳಲ್ಲಿ ಹೋಗಿದ್ದಾಗ, ಅಲ್ಲಿನ ಜೀತ ವಿಮುಕ್ತರು ಏನು ಹೇಳಿದರು ಎಂದರೆ, ನಮಗೆ ಈಗ ಕೊಡುತ್ತಿರುವ ಹಾಗೆಯೇ ೬೨೫೦ ರೂಪಾಯಿಗಳನ್ನು ಕೊಟ್ಟುಬಿಡಿ. ಇದರಿಂದ ನಾವೇ ಏನೆಲ್ಲ, ಹಸು

ಮೊದಲಾದವುಗಳನ್ನು ಕೊಂಡುಕೊಂಡರೆ ನಮ್ಮದೇ ಆದ ಸ್ವತ್ತನ್ನು ಪಡೆದಹಾಗಾಗುತ್ತದೆಂದು ಫಲಾನುಭವಿಗಳು ಒತ್ತಡ ತರುತ್ತಿರುವುದರಿಂದ ಬೇರೆ ಯೋಜನೆಗಳನ್ನು ನಾವು ರೂಪಿಸುವುದಕ್ಕೆ ಆಗಲಿಲ್ಲ. ಇದರೆ ಇಲ್ಲಿ ನಾವು ಸ್ಥಳೀಯ ನಾಯಕತ್ವದ ದೂರದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸರಕಾರ ಜಮೀನು ಕೊಡಿಸತಕ್ಕಂಥಾದ್ದು, ಆ ಜಮೀನಿನಲ್ಲಿ ೧೦೦ ಭಾವಿಗಳ ಯೋಜನೆಗಳ ಮೂಲಕ ಭಾವಿಗಳನ್ನು ತೆಗೆಸಿಕೊಡತಕ್ಕಂಥಾದ್ದು, ಅಂತ್ಯೋದಯ ಕಾರ್ಯಕ್ರಮದ ಮೂಲಕ ಅವರಿಗೆ ಹೆಚ್ಚು ಹಣ ಸಹಾಯವನ್ನು ಕೊಡಿಸತಕ್ಕಂಥಾದ್ದು, ಮತ್ತಿತರ ಅಗತ್ಯ ಏರ್ಪಾಡುಗಳನ್ನು ಮಾಡುವುದು. ಆದರೆ ಇವೆಲ್ಲವೂ ಇದಕ್ಕೆ ಪೂರಕವಾಗಿ ಬರತಕ್ಕಂಥಾದ್ದಾಗಿವೆ. ಕೇವಲ ೬೫೫ ರೂಪಾಯಿಗಳನ್ನು ಮಾತ್ರ ಅವರಿಗೆ ಕೊಟ್ಟರೆ ಅವರ ಪುನರ್‌ವ್ಯವಸ್ಥೆಯಾಗುವುದಿಲ್ಲ. ಅವರ ಬಡತನ ನಿರ್ಮೂಲನೆಗೆ ಆಗುವುದಿಲ್ಲ. ಆದರೆ ನಮ್ಮ ಉಳಿದ ಕಾರ್ಯಕ್ರಮಗಳನ್ನು ಈ ಕಾರ್ಯಕ್ರಮಕ್ಕೆ ಪೂರಕವಾಗಿ ನಿಲ್ಲಿಸಲು ಸಾಧ್ಯವಾದರೆ ಪ್ರಾಯಶಃ ಅವರೆಲ್ಲರೂ ಪುನರ್‌ವ್ಯವಸ್ಥೆಯಾನ್ನು ಪಡೆಯಲು ಸಾಧ್ಯವಾಗಬಹುದು: ಸನ್ಮಾನ್ಯ ಬಸವಲಿಂಗಪ್ಪನವರು ಹೇಳಿದಂತೆ ಎಲ್ಲೆಲ್ಲಿ ಸರಕಾರಿ ಜಮೀನುಗಳು ಇವೆ, ಅಲ್ಲಿಗೆ ಈ ಜನರು ಹೋಗಲಿಕ್ಕೆ ಒಪ್ಪಿಗೆ ಕೊಡತಕ್ಕಂಥ ಒಂದು ನಾಯಕತ್ವ ಅಲ್ಲಿ ಇದ್ದರೆ ಆ ಜನರಿಗೆ ಪಟ್ಟಾ ಕೊಡತಕ್ಕಂಥ ವ್ಯವಸ್ಥೆಯನ್ನು, ನೂರು ಭಾವಿಗಳ ಯೋಜನೆಯಡಿಯಲ್ಲಿ ಅಲ್ಲಿ ಭಾವಿ ತೆಗೆಸಿಕೊಡತಕ್ಕಂಥ ವ್ಯವಸ್ಥೆಯನ್ನು, ಹಾಗೂ ಅಂತ್ಯೋದಯ ಯೋಜನೆಯಡಿಯಲ್ಲಿ ಹಣಕಾಸನ್ನು ಕೊಡಿಸತಕ್ಕಂಥ ವ್ಯವಸ್ಥೆಯನ್ನು, ಬ್ಯಾಂಕ್‌ಗಳ ಮೂಲಕ ಐಆರ್‌ಡಿಪಿಯಲ್ಲಿ ಸಾಲ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಜೀತ ವಿಮುಕ್ತರಿಗೆ ನೆರವು ಕೊಡಲು, ಆಒಂದು ವ್ಯವಸ್ಥೆಯನ್ನು ಮಾಡಲು ಸರಕಾರವು ತಯಾರಿದೆ.

ಶ್ರೀ ಆರ್. ವೆಂಕಟರಾಮಯ್ಯ:—ಜೀತದಾಳುಗಳನ್ನು ಪತ್ತೆ ಹಚ್ಚುವ ಬಗ್ಗೆ ೧೯೮೬ರಲ್ಲಿ ಸರಕಾರದವರು ಒಂದು ಸರ್ವೆ ಮಾಡಿಸಿದ್ದಾರೆ. ಸರಕಾರದ ಲೆಕ್ಕದ ಪ್ರಕಾರ ಸುಮಾರು ೨೪ ಸಾವಿರ ಜನರು ಆಗ ಇದ್ದರು. ಆ ಸಮಯದಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಕೆಲವರು ಹೆಸರು ಕೊಡದೇ ಉಳಿದುಕೊಂಡಿದ್ದಾರೆ, ಈಗ ಪುನಃ ಸರ್ವೆ ಮಾಡಿಸಿದರೆ ಲಕ್ಷಾಂತರ ಜನರು ಸಿಗುತ್ತಾರೆ. ಆದುದರಿಂದ ಈಗ ಪುನಃ ಸರ್ವೆ ಮಾಡಿಸಿ ಉಳಿದ ಜೀತದಾಳುಗಳಿಗೂ ರಿಲೀಫ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:—ಈ ಸಲಹೆಯನ್ನು ಸರಕಾರದವರು ಪರಿಶೀಲಿಸುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಜೀತದಾಳುಗಳು ಇನ್ನೂ ಇದ್ದಾರೆ ಎನ್ನುವುದನ್ನು ಸರಕಾರದವರು ಒಪ್ಪಿಕೊಳ್ಳಬೇಕು. ಆಗ ಎಷ್ಟೋ ಜನರು ಭಯ ಪಟ್ಟುಕೊಂಡು ಹೆಸರನ್ನು ಕೊಟ್ಟಿರಲಿಲ್ಲ, ಆದುದರಿಂದ ಈಗ ಪುನಃ ಒಂದು ಸರ್ವೆ ಮಾಡಿಸಿ ಆ ನೊಂದವರ್ಗದವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್:—೧೯೮೬ನೇ ಇಸವಿಯಲ್ಲಿ ಇಂಥ ಅನೇಕ ಹೊಸ ಹೊಸ ಸಮಾಜ ಕಲ್ಯಾಣಕಾರಿ ಕಾರ್ಯಕ್ರಮಗಳು ಇದ್ದಂಥ ಸಮಯದಲ್ಲಿ ಇಂತಹ ೨೪, ೩೫೫ ಜನರು ಇದ್ದರು ಈಗ ಲಕ್ಷಾಂತರ ಜನರು ಇದ್ದಾರೆ ಎಂದು ಹೇಳುವುದು ತಪ್ಪಾಗಬಹುದು. ಆದರೆ ಈಗಲೂ ಕೂಡ ಜೀತದಾಳುಗಳು ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ ಆರ್ಥಿಕತೆಯ ಮತ್ತು ಬಡತನದ ಹಾಗೂ ಬೇರೆ ಬೇರೆ ಕಾರಣಗಳಿಂದಾಗಿ ಅಂಥವರನ್ನು ಗುರುತಿಸುವುದಕ್ಕೆ ಸಾಧ್ಯವಾಗದಿರಬಹುದು. ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ. ಮಾನ್ಯ ಸಚಿವರು ತೆರೆದ ಹೃದಯದಿಂದ ನನ್ನ ಸಲಹೆಯನ್ನು ಸ್ವಾಗತಿಸಿದ್ದಾರೆ, ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಆದರೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವುದೇ ಸಮಾಜದವರನ್ನು ಬದಲಾವಣೆ ಮಾಡುವಾಗ, ಸಮಾಜದಲ್ಲಿ ಯಾವುದಾದರೂ ಬದಲಾವಣೆಗಳನ್ನು ತರಬೇಕೆಂಬ ಇಚ್ಛೆ ಇದ್ದಾಗ ಬಲಾತ್ಕಾರವಾಗಿ ಈ ಅನಾಥರನ್ನು ನಾವೇ ಪುನರ್‌ವ್ಯವಸ್ಥೆ ಮಾಡಬೇಕಾಗುತ್ತದೆ. ಅವರನ್ನು ಕೇಳಿ ನಾವು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗೆ ಮಾಡಿದರೆ ಯಶಸ್ವಿಯೂ ಆಗುವುದಿಲ್ಲ. ಇಂಥ ಸಂದರ್ಭದಲ್ಲಿ ಸರಕಾರವೇ ಅವರಿಗೆ ತಂದೆತಾಯಿಗಳ ರೂಪದಲ್ಲಿ ನಿಂತು ಯಾರು ನಿರ್ಗತಿಕರಾಗಿದ್ದಾರೆ ಅಂಥವರಿಗೆ ಬಲಾತ್ಕಾರವಾಗಿಯಾದರೂ ಪುನರ್‌ವಸತಿಯನ್ನು ಕಲ್ಪಿಸಬೇಕೆಂದು ನಾನು ಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್:—ಮಾನ್ಯ ಸಭಾಪತಿಯವರೇ ನಾನು ಈಗಾಗಲೇ ಈ ವಿಷಯ ಕುರಿತು ಉತ್ತರ ಕೊಟ್ಟಿದ್ದುದನ್ನು ಪುನರುಚ್ಚರಿಸ ಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ

ಆಲ್ಲಿಯ ಸ್ಥಳೀಯ ನಾಯಕತ್ವ ಈ ಬಗ್ಗೆ ಒತ್ತಡವನ್ನು ತರಬೇಕಾಗುತ್ತದೆ. ಆದನು ಬಿಟ್ಟು ಅವರಿಗೆ ೬೫೫೦ ರೂಪಾಯಿಗಳನ್ನು ಕೊಟ್ಟು ಬಿಟ್ಟು ಕೈತೊಳೆಯುವುದಲ್ಲ. ಆದುದರಿಂದ ಯಾವುದೇ ಸ್ಥಳಗಳಲ್ಲಿ ಇಂಥ ನಾಯಕತ್ವ ಮುಂದೆ ಬಂದರೆ ಅದಕ್ಕೆ ಸರಕಾರವು ಪೂರಕವಾಗಿ ನಿಲ್ಲುತ್ತದೆ ಎಂದು ಹೇಳ ಬಯಸುತ್ತೇನೆ.

ಶ್ರೀ ಎಂ. ಶಿವಣ್ಣ:—ನಮ್ಮ ಜಿಲ್ಲೆಯಲ್ಲಿಯೂ ಬಹಳಷ್ಟು ಪ್ರಕರಣಗಳು ಪತ್ತೆಯಾಗಿವೆ. ಆದರೆ ಜೀತಮುಕ್ತರು ಅಲ್ಲದವರಿಗೆ ಕೂಡ ಈ ಒಂದು ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಆಲ್ಲಿನ ಮಂಡಳ ಪ್ರಧಾನರು ಮತ್ತು ಸದಸ್ಯರು ಶಾಮೀಲಾಗಿದ್ದಾರೆ. ಕೆಲವರು ಜೀತಮುಕ್ತರು ಆಲ್ಲವೆಂದು ಗೊತ್ತಿದ್ದರೂ ಕೂಡ ಇವರುಗಳು ಅಕ್ರಮವಹಾರ ಎಸೆಗುವುದರಲ್ಲಿ ಸಹಭಾಗಿಗಳಾಗಿದ್ದಾರೆ. ಇದು ತಪ್ಪು ಎಂದು ಗೊತ್ತಿದ್ದರೂ ಕೂಡ ಈ ಒಂದು ಸೌಲಭ್ಯವನ್ನು ಜೀತದಾಳುಗಳಲ್ಲದವರಿಗೆ ಕಲ್ಪಿಸಿ ಕೊಟ್ಟಿದ್ದಾರೆ. ಆದುದರಿಂದ ಇಂಥ ಯಾವುದೇ ಅವ್ಯವಹಾರದ ಪ್ರಕರಣಗಳಲ್ಲಿ ಪ್ರಧಾನರು ಆಥವಾ ಸದಸ್ಯರು ಶಾಮೀಲಾಗಿದ್ದಾರೆ ಎಂದು ಕಂಡು ಬಂದಮೇಲೆ ಅಂಥವರನ್ನು ಅನರ್ಹರನ್ನಾಗಿ ಮಾಡುವ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇಂಥ ಅವ್ಯವಹಾರಗಳನ್ನು ಮಾಡುವವರಿಗೆ ಭಯ ಇರುವುದಿಲ್ಲ. ಅದೇ ರೀತಿಯಲ್ಲಿ ಈ ಫಲಾನುಭವಿಗಳಿಗೆ ಕೊಡುವ ಹಣದಲ್ಲಿನ ವಿಚಾರವಾಗಿ ಈಸದನದಲ್ಲಿ ಆನೇಕಭಾರಿ ಚರ್ಚೆಯಾಗಿದೆ. ೬೫೫೦ ರೂಪಾಯಿಗಳನ್ನು ಫಲಾನುಭವಿಗಳಿಗೆ ಕೊಟ್ಟರೂ ಸಹ ಆವರಿಗೆ ಸುಮಾರು ೩೦೦೦ ರೂಪಾಯಿಗಳ ವರೆಗೆ ಮಾತ್ರ ಸಿಗುತ್ತದೆ. ಇದನ್ನು ನೋಡಿಯೂ ಸರಕಾರ ಇವೊತ್ತು ಕಣ್ಣಿಲ್ಲದೇ ಕುರುಡಾಗಿದೆ ಎಂದು ಹೇಳಬೇಕಾಗುತ್ತದೆ. ಅಧಿಕಾರಿಗಳು ಮತ್ತು ಮಧ್ಯವರ್ತಿಗಳಿಂದಾಗಿ ಆವರಿಗೆ ಪೂರ್ಣ ಹಣ ಇವೊತ್ತು ಸಿಗುತ್ತಾ ಇಲ್ಲ. ಆದಕಾರಣ ಆವರಿಗೆ ಚೆಕ್‌ಗಳ ಮೂಲಕ ಹಣವನ್ನು ಪಾವತಿ ಮಾಡುವ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು. ಇದಲ್ಲದೆ ನಾನು ಮೊದಲೇ ಹೇಳಿದೆ, ಏನೆಂದರೆ ಇದು ದಿನೇ ದಿನೇ ಹೆಚ್ಚಾಗುತ್ತಿದೆ ಎಂದು, ನಿಜವಾಗಿ ಜೀತರಲ್ಲದವರು ಕೂಡ ಜೀತರ ಪಟ್ಟಿಯಲ್ಲಿ ಹೆಸರು ಸೇರಿಸಿ ಕೊಳ್ಳುತ್ತಿದ್ದಾರೆ: ಆದೂ ಆಲ್ಲದೆ ಒಬ್ಬನ ಹೆಸರು ಇನ್ನೊಬ್ಬನ ಹೆಸರಿನಂತಿರುವುದು, ತಂದೆ ಹೆಸರುಗಳಲ್ಲಿ ತಾಳೆ ಇಲ್ಲದಿರುವುದು ಸಹಜ. ಆದ್ದರಿಂದ ಯಾವ ಟೈಮಿನೊಳಗೆ ಇದನ್ನು ಪೂರ್ಣಗೊಳಿಸುತ್ತೀರೆಂದು ಖಚಿತವಾಗಿ ಹೇಳಬೇಕು. ಇದಕ್ಕೆ ಹಣ ಹೇಗಿದ್ದರೂ ಕೇಂದ್ರದಿಂದ ಬರುವುದರಿಂದ ಹಣಕ್ಕಂತೂ ತೊಂದರೆ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್. ಉಪಸಭಾಧ್ಯಕ್ಷರೇ, ಮಾನ್ಯ ಮಾತಿಗೂ ಕೇಂದ್ರದ ಪಣ ಏನುತ್ತಾರೆ. ಕೇಂದ್ರ ಏನು ನಮಗೆ ಸೇರಿದಲ್ಲವೇ ? ಆ ಹಣವೂ ಸಾರ್ವಜನಿಕರದಲ್ಲವೇ ? ಯಾರ ಹಣವಾದರೂ ಕೂಡ ದುರುಪಯೋಗವಾಗಬಾರದು. ಇದು ಕೇಂದ್ರ ಹಾಗೂ ರಾಜ್ಯದ ಹಣದ ಪ್ರಶ್ನೆಯಲ್ಲ. ಜೀತವಿಮುಕ್ತರ ಸರ್ಕಾರದ ಸವಲತ್ತು ಪಡೆಯುವ ಪ್ರಯತ್ನದ ಬಗ್ಗೆ ಹೇಳಿದರು. ನಾವು ಈಗಾಗಲೆ ೧೬೯೧ಮಂದಿ ಅಂಥವರನ್ನು ತಂದು ಹಿಡಿದ್ದಿದ್ದೇವೆ, ಹಾಗೂ ಅಂತಹವರನ್ನು ಪಟ್ಟಿಮಾಡಿ ತೆಗೆದುಹಾಕಿದ್ದೇವೆ. ನಾವು ಕೊಡುವ ಹಣದ ಪೈಕಿ ಆವರಿಗೆ ಪೂರು ಸಾವಿರವೇ ಸಿಗುತ್ತದೆ. ಮೋಸವಾಗುತ್ತದೆ ಎಂದರೆ, ನಾವು ಚೆಕ್ ಅನ್ನು ನೇರವಾಗಿ ಬೇಕಾದರೆ ಕೊಡುತ್ತೇವೆ. ಆದರೆ ಅನಕ್ಷರಸ್ತರು ತುಂಬಿರುವ ಈ ದೇಶದಲ್ಲಿ ವಂಚನೆ ನಡೆಯಬಹುದು ಅಂಥ ಪ್ರಕರಣಗಳನ್ನು ಆವರು ನಮ್ಮ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ೧೧ ಪ್ರಕರಣಗಳನ್ನು ನಿಮ್ಮ ತಾಲ್ಲೂಕಿನಲ್ಲಿ ಕಂಡುಹಿಡಿದು ೯ ಜನರನ್ನು ಪೋಲೀಸರವಶಕ್ಕೆ ಕೊಟ್ಟಿದ್ದೇವೆ, ಇನ್ನಿಬ್ಬರ ಮೇಲೆ ಕೇಸು ಹಾಕಲು ಕ್ರಮ ತೆಗೆದುಕೊಂಡಿದ್ದೇವೆ.

ಉಪಾಧ್ಯಕ್ಷರು.—ಆ ಬಂದಿನ ಪ್ರಶ್ನೆ ಖಿರ್ಗೆಯವರದ್ದು, ಆವರು ಆಬ್ಸೆಂಟ್ ಇದ್ದಾರೆ. ಶ್ರೀ ಭೂಪತಿಯವರ ಪ್ರಶ್ನೆಗೆ ಸರ್ಕಾರ ಟೈಮ್ ಕೇಳಿದೆ.

ಶ್ರೀ ಯು. ಭೂಪತಿ.—ಟೈಮ್ ಕೇಳುವುದಾದ್ದೇನು ಆದರಲ್ಲಿದೆ ? ಯಾವಾಗ ಉತ್ತರ ಕೊಡುತ್ತಾರೆ ಎಂಬುದನ್ನು ಸರ್ಕಾರದವರ ಹೇಳಲಿ.

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).—ಈ ಬಗ್ಗೆ ಇಡೀ ಕರ್ನಾಟಕದಿಂದ ಮಾಹಿತಿ ತರಿಸಬೇಕಾಗಿದೆ, ವಿವರಗಳು ಬಂದತಕ್ಷಣ ಸಾಧ್ಯವಾದರೆ ೩೧ರೊಳಗೇನೆ ಉತ್ತರ ಕೊಡುತ್ತೇನೆ.